(ಇಂದು ದಿನಾಂಕಃ 20-08-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ವಿ.ಎ.ಟಿ.ವಕೀಲರಿಂದಃ**

ದಾವಾ ಸ್ವತ್ತಿನ ಈಗಿನ ಮಾರುಕಟ್ಟೆ ಬೆಲೆ ಒಂದು ಕೋಟಿ ಮೇಲ್ಪಟ್ಟು ಇರಬಹುದು. ಪ್ರತಿವಾದಿಯರ ವಿರುದ್ಧ ಈ ದಾವೆಯನ್ನು ನಮ್ಮ ಜಾಗೆ ನಮಗೆ ಬೇಕು ಎಂದು ಹಾಕಿದ್ದೇವೆ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು, ಸಾಮ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾಸ್ತಿಗೆ ಸಂಬಂಧಪಟ್ಟಂತೆ ಕಂದಾಯ, ಇನ್ನುಳಿದ ತೆರಿಗೆಯನ್ನು ಕಟ್ಟುತ್ತಾ ಬಂದಿದ್ದಾರೆ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಪಟ್ಟಂತಹ ಎಲ್ಲಾ ಆಗು-ಹೋಗುಗಳನ್ನು ಅವರೇ ನೋಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಮ್ಮ ಜಾಗೆ ನಮಗೆ ಬೇಕು ಎಂದು ಹೇಳುತ್ತಿದ್ದೇವೆ. ನಮ್ಮ ಜಾಗೆ ನಮಗೆ ಬೇಕು ಎಂದು ಕೇವಲ ಮೌಖಿಕವಾಗಿ ಹೇಳುತ್ತಾ ಬಂದಿದ್ದು ಆ ಬಗ್ಗೆ ಯಾವುದೇ ದಾಖಲಾತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮೌಖಿಕವಾಗಿ ಕೇಳಿದ್ದೇವೆ ಎಂದು ನಾನು ಕೊಟ್ಟ ನೋಟಿಸಿನಲ್ಲಾಗಲೀ, ದಾವಾ ಪತ್ರದಲ್ಲಾಗಲೀ ಬರೆಸಿಲ್ಲ ಎಂದರೆ ಸಾಕ್ಷಿ ನನಗೆ ಅರ್ಥವಾಗುತ್ತಿಲ್ಲ ಎಂದು ಹೇಳುತ್ತಾರೆ. ದಾವಾಸ್ತಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನಮ್ಮ ಅಜ್ಜ ಅವರಿಗೆ ಅನುಮತಿಯ ಮೇರೆಗೆ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆಟದ ಮೈದಾನಕ್ಕಾಗಿ ಕೊಟ್ಟಿದ್ದರು ಎಂದು ಹೇಳುತ್ತಾರೆ. ದಾವಾಸ್ವತ್ತಿಗೆ ನಾನು ಮಾಲಿಕನು ಅಲ್ಲದ್ದರಿಂದ ಪರಿಹಾರ ಪಡೆಯಲು ಅರ್ಹನಲ್ಲ ಅನ್ನುವುದು ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ